1	2	3	4
31	Begalapelli	246 20	10,160.70
32	Surgapallapalli	881.49	8,114.19
33	Motakapasandra	1,224.19	5,836.29
34	Mudimalagu	10,535.34	3,366.25
35	Y.M. Thungapalli	1,035.90	2,224.00
36	Rayalplad	18,053.49	3,730.05
37	Yeranavadipalli	428.35	2,543.47
38	Addegal	10,035.63	3,489.91
39	Vamp lli	6,888.10	7,931.31
40	Koorg palli	446.90	2,878.35
41	Gasnipalli	7,602.40	21,806.17
42	Kodipalli	3,670.60	7,237.00
43	Byreganapalli	54.08	7,127.93
44	Yachanapalli	14,591.20	9,251.05

ಶ್ರೀ ಯು. ಭೂಪತಿ (ಶ್ರೀ ರಮೇಶ್‌ಕುಮಾರ್ ಅವರ ಪರವಾಗಿ).—ಅಧ್ಯಕ್ಷರೆ. ಮುಂಡಲ್ ಪಂಚಾಯಿತಿಗಳು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಹಳೆಯ ಪಂಚಾಯಿತಿಗಳು ಇದ್ದವು. ಈಗಿನ ಒಂದು ಮುಂಡಲ್ ಪಂಚಾಯಿತಿಗೆ ಹಿಂದಿನ ನಾಲ್ಕೈದು ಪಂಚಾಯಿತಿಗಳು ಇರುತ್ತಿದ್ದವು. ಅಡ್ಮಿನಿಸ್ಟ್ರೇಟರ್ ಎಂದು ನೇಮಕ ಮಾಡಿದರು, ಹಳೆಯ ಪಂಚಾಯಿತಿಗಳಲ್ಲಿದ್ದಂಥ ಅಧ್ಯಕ್ಷರು ಹಣವನ್ನು ಕೂಡಿಸಿ ಪಂಚಾಯಿತಿಗಳಲ್ಲಿ ಇಟ್ಟಿದ್ದರು. ಅಡ್ಮಿನಿಸ್ಟ್ರೇಟರ್ ಎಂದು ಬಂದಿರುವವರು ಯದ್ವಾತದ್ವಾ ಖರ್ಚು ಮಾಡಿದ್ದಾರೆ ಎನ್ನುವುದೇ ಈ ಪ್ರಶ್ನೆಯ ಉದ್ದೇಶ. ಈಗ ಮುಂಡಲ್ ಪಂಚಾಯಿತಿಗಳಿಗೆ ಕಾರ್ಯದರ್ಶಿ ಎಂದು ನೇಮಕ ಮಾಡಿದ್ದೀರಿ. ಅಲ್ಲಿ ಹಣಕಾಸಿನ ಅಪವ್ಯಯ ಗಿಲ್ಲವೇ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಮುಂಡಲ್ ಪಂಚಾಯಿತಿಗಳು ಬರುವುದಕ್ಕೆ ಮುಂಚೆ ಇದ್ದ ಪಂಚಾಯಿತಿಗಳು ಅದರಲ್ಲಿದ್ದಂಥ ಹಣವನ್ನು ದುರುಪಯೋಗ ಮಾಡಿದ್ದಾರೆ ಎನ್ನುವುದು ಮಾನ್ಯ ಸದಸ್ಯರ ಶಂಕೆಯಾಗಿದೆ. ನಾನು ಕೊಟ್ಟರತಕ್ಕ ಅನುಬಂಧದಲ್ಲಿ ೭ ಗ್ರಾಮಗಳನ್ನು ಬಿಟ್ಟರೆ ಹೆಚ್ಚು ಕಡಿಮೆ ಮುಂಡಲ್ ಪಂಚಾಯಿತಿ ಹಣಕ್ಕಿಂತಲೂ ಹೆಚ್ಚಿನ ಹಣ ವರ್ಗಾವಣೆ ಆಗಿದೆ. ೭ ಗ್ರಾಮಗಳಲ್ಲಿ ಮುಂಡಲ್ ಪಂಚಾಯಿತಿಗಳಲ್ಲಿ ಹೆಚ್ಚು ಹಣ ವೆಚ್ಚವಾಗಿದೆ. ಒಂದು ವೇಳೆ ದುರುಪಯೋಗವಾಗಿದೆ ಯೆಂದು ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಗೊತ್ತಿದ್ದರೆ ಅದರ ಮಾಹಿತಿಯನ್ನು ನನಗೆ ಕೊಟ್ಟರೆ ಅಂಥವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆಂದು ಭರವಸೆ ಕೊಡುತ್ತೇನೆ.

ಶ್ರೀ ಯು. ಭೂಪತಿ.—ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ಯಾವ ಪ್ರಶ್ನೆಗೆ ಉತ್ತರ ಕೊಡ ತ್ತಿದ್ದಾರೋ ಗೊತ್ತಿಲ್ಲ ಇಂಗ್ಲೀಷ್‌ನಲ್ಲಿ ಕೇಳಿರತಕ್ಕ ಪ್ರಶ್ನೆ ಸರಿಯಾಗಿದೆ. ಆದರೆ ಇದನ್ನು ಕನ್ನಡಕ್ಕೆ ತರ್ಜುಮೆ ಮಾಡಿದಾಗ ತಪ್ಪಾಗಿದೆ. ''ವಿವಿಧ ಗ್ರಾಮ ಪಂಚಾಯಿತಿಗಳಲ್ಲಿನ ಗ್ರಾಮಾಧಿ ಕಾರಿಗಳು ಬಹುಮಟ್ಟಿಗೆ ಎಲ್ಲ ಹಣವನ್ನೂ ವಾಸ್ತವವಾಗಿ ವ್ಯಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ'' ಎಂದು. ಇದರಲ್ಲಿ ಕನ್ನಡದಲ್ಲಿರತಕ್ಕ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೋ? ಅಥವಾ ಇಂಗ್ಲೀಷ್‌ನಲ್ಲಿರತಕ್ಕ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೋ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು.—ಮಾನ್ಯ ರಮೇಶ್‌ಕುಮಾರ್‌ರವರು ಬಂದು ಅದನ್ನು ಕೇಳಿಕೊಳ್ಳುತ್ತಾರೆ. ಮುಂದಿನ ಪ್ರಶ್ನೆ ತೆಗೆದುಕೊಳ್ಳಿರಿ.

ಪುರಸಭೆಗಳ ಚುನಾವಣೆಯನ್ನು ಮುಂದೂಡುವ ಬಗ್ಗೆ

೪೩ (೨೨) (೩) ಶ್ರೀ ಕೆ.ಹೆಚ್. ಪಾಟೀಲ್ (ಗದಗ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ:—

ಪುರಸಭೆ ಚುನಾವಣೆಗಳನ್ನು ಮುಂದೂಡಲು ಕಾರಣಗಳಾವುವು?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಗಡಿ ಮೇರೆಗಳನ್ನು ವಿಸ್ತರಿಸಬೆ ಕಾಗಿರುವುದರಿಂದ ಮತ್ತು ಮತದಾರರ ಪಟ್ಟಿಗಳನ್ನು ಪರಿಷ್ಕರಿಸುವ ಸಲುವಾಗಿ ಪುರಸಭೆಗಳ, ನಗರಸಭೆಗಳ ಚುನಾವಣೆಗಳನ್ನು ಮುಂದೂಡಲಾಯಿತು.

ಶ್ರೀ ಕೆ.ಹೆಚ್. ಪಾಟೀಲ್.—ಆರು ವರ್ಷಗಳಿಂದ ಈ ಸರ್ಕಾರದ ಕೈಯಲ್ಲಿ ಆಗಿಲ್ಲ. ನಾವು ಎಷ್ಟೇ ವಿರೋಧ ಮಾಡಿದರೂ ಮಾನ್ಯ ಅಬ್ದುಲ್ ನಜೀರ್‌ಸಾಬ್‌ರವರು ಮಂಡಲ ಪಂಚಾಯತ್ ಲಿಸ್ಟ್‌ನ್ನು ತಯಾರು ಮಾಡಿದರು. ನಿಮಗೆ ಇನ್ನೂ ಎಷ್ಟು ವರ್ಷಕಾಲ ಇದಕ್ಕೆ ಬೇಕು ಎಂಬುದನ್ನು ಹೇಳ್ತೀರಾ? ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಉದಾಹರಣೆಗೆ ನಮ್ಮ ಗದಗ್ ಮುನಿಸಿಪಾಲಿಟಿಯನ್ನೇ ತೆಗೆದುಕೊಳ್ಳಿ. ಅದರ ಚುನಾವಣೆಯನ್ನು ಮುಂದಕ್ಕೆ ಹಾಕುತ್ತಾ ಹೋಗುತ್ತಿದ್ದೀರಿ. ಅಲ್ಲಿ ಚುನಾವಣೆಯನ್ನು ಮಾಡಿದರೆ ಜನರು ನನಗೆ ಮತ ಕೊಡುವುದಿಲ್ಲವೆಂದು ತಿಳಿದುಕೊಂಡು ನೀವೇನಾದರೂ ಚುನಾವಣೆಯನ್ನು ಮುಂದಕ್ಕೆ ಹಾಕುತ್ತಿದ್ದೀರಾ? ಮಾನ್ಯ ಚಂದ್ರಶೇಖರ್‌ರವರು ಮಂತ್ರಿಗಳಾಗಿರುವುದರಿಂದ ಅವರ ಬಗ್ಗೆ ನಮಗೆ ಗೌರವ ಇದೆ. ಏಕೆಂದರೆ ಅವರು ಪ್ರಜಾಪ್ರಭುತ್ವದ ಬಗ್ಗೆ ಬಹಳ ಮಾತನಾಡಿದ್ದಾರೆ. ನಾನಾದರೂ ಕೇಳುತ್ತೇನೆ ಮತ್ತೆ ಚುನಾವಣೆಗಳನ್ನು ಮುಂದಕ್ಕೆ ಹಾಕುವುದಕ್ಕೆ ಹೋಗಬೇಡಿರಿ. ಇನ್ನು ಎಷ್ಟು ದಿವಸದಲ್ಲಿ ಈ ಮುನಿಸಿಪಾಲಿಟಿಗಳ ಚುನಾವಣೆಗಳನ್ನು ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಹೆಚ್ ಪಾಟೀಲ್‌ರವರು ಒಂದು ಒಳ್ಳೆಯ ಮಾತನಾಡಿದ್ದಾರೆ. ಸುಮಾರು ೧೦-೧೫ ವರ್ಷಗಳಿಂದ ಪುರಸಭೆಗಳಿಗೆ ಚುನಾವಣೆಗಳೇ ಆಗಿರಲಿಲ್ಲ. ಆದರೆ ನಾವು ಅಧಿಕಾರಕ್ಕೆ ಬಂದಮೇಲೆ ೧೯೮೩ರಲ್ಲಿ ಚುನಾವಣೆಗಳನ್ನು ಮಾಡಿದ್ದೇವೆ. ಇದನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ಭಾವಿಸಿದ್ದೇನೆ. ಈ ಪುರಸಭೆಗಳ ಚುನಾವಣೆ ತಡವಾಗುವುದಕ್ಕೆ ಕಾರಣ ಏಂದರೆ ೧೮ ವರ್ಷ ತುಂಬಿದ ಯುವಕರನ್ನು ಮತದಾರರನ್ನಾಗಿ ಮಾಡಿದ್ದೇವೆ. ೧೯೮೭ರ ಜನವರಿಗೆ ಯಾರ್ಯಾರಿಗೆ ೧೮ ವರ್ಷ ತುಂಬುತ್ತದೆ ಅವರು ಮತವನ್ನು ಹಾಕುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಇದರ ಜೊತೆಗೆ ಗಡಿ ವಿಸ್ತರಣೆ ವಿಚಾರ ಬಂದದ್ದರಿಂದ ಮತ್ತೆ ಇದರ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ. ಆಷ್ಟೇ ಅಲ್ಲ, ಮಂಡಲ ಪಂಚಾಯತ್ ಚುನಾವಣೆಗಳು ಆದಮೇಲೆ ಸ್ವಲ್ಪ ಮಟ್ಟಿಗೆ ಓವರ್‌ಲ್ಯಾಪ್ ಆಗಿದೆ.

ಮತ್ತೊಂದು ಕಾರಣವನ್ನು ಪ್ರಾರಂಭಿಕವಾಗಿ ಹೇಳುವುದಾದರೆ, ನಾವು ಚುನಾವಣೆಯನ್ನು ಮಾಡಬೇಕೆಂದು ತೆಗೆದುಕೊಂಡ ತೀರ್ಮಾನವನ್ನು ಅನುಷ್ಠಾನಗೊಳಿಸುವುದರಲ್ಲಿ ಹಿಂದೆ ಸರಿದಿಲ್ಲ, ಮಳೆಗಾಲ ಬಂದರೂ ಕೂಡ ನಾವು ಚುನಾವಣೆಯನ್ನು ನಿಲ್ಲಿಸಲೇಬಾರದೆಂದು ತೀರ್ಮಾನವನ್ನು ತೆಗೆದುಕೊಂಡು ಚುನಾವಣೆ ಮಾಡಿದ್ದೇವೆ. ಬರುವ ಡಿಸೆಂಬರ್‌ಗೆ ೧೮ ವರ್ಷ ತುಂಬುವ ಯುವಕರಿಗಾಗಿ ನಾವು ಡಿಸೆಂಬರ್ ೩೧ರವರೆಗೆ ಈ ಚುನಾವಣೆಯನ್ನು ಮುಂದೂಡಿದ್ದೇವೆ.

ಶ್ರೀ ಕೆ.ಹೆಚ್. ಪಾಟೀಲ್.—ಇದರಲ್ಲಿ ನನ್ನ ಅಭ್ಯಂತರವಿಲ್ಲ. ೧೯೮೭ರ ಜನವರಿಗೆ ೧೮ ವರ್ಷ ತುಂಬುವವರಿಗೆ ತುಂಬಲಿ ಎಂದು ನಿಧಾನ ಮಾಡಿದೆವು ಎಂದು ಹೇಳುತ್ತಿದ್ದೀರಿ. ೧೯೮೭ರ ಜನವರಿ ಬಂದು ಹೋಯಿತು. ಸಾಕಷ್ಟು ಜನರಿಗೆ ೧೮ ವರ್ಷ ತುಂಬಿತು. ೧೯೮೮ನೇ ಇಸವಿಯ ಜನವರಿ ಹತ್ತಿರ ಬರುತ್ತಿದೆ, ಅಷ್ಟು ಹೊತ್ತಿಗೆ ಇನ್ನಷ್ಟು ಜನರಿಗೆ ೧೮ ವರ್ಷ ತುಂಬುತ್ತದೆ, ಹೀಗೇ ಬಿಟ್ಟುಕೊಂಡು ಹೋದರೆ ಇನ್ನೂ ಬಹಳಷ್ಟು ಜನ ಯುವಕರು ಬರುತ್ತಾರೆ. ಇದು ಸರಿಯಲ್ಲ. ನಾನಾದರೂ ತಮ್ಮನ್ನು ಕೇಳುತ್ತೇನೆ. ಇನ್ನು ಎಷ್ಟು ವರ್ಷಗಳಲ್ಲಿ ಪುರಸಭೆಗಳಿಗೆ ಚುನಾವಣೆಗಳನ್ನು ಮಾಡುತ್ತೀರಿ ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು. ಮುಂದೆ ನೀವು ಮಂತ್ರಿಗಳಾಗಿ ಇರುತ್ತೀರೋ, ಇಲ್ಲವೋ ಗೊತ್ತಿಲ್ಲ ಎಷ್ಟು ವರ್ಷಗಳಲ್ಲಿ ಈ ಚುನಾವಣೆಗಳನ್ನು ಮಾಡುತ್ತೀರೆಂದು ನಿರ್ದಿಷ್ಟವಾಗಿ ಹೇಳಿ.

ಶ್ರೀ ಎಂ. ಚಂದ್ರಶೇಖರ್.—ವಿಸ್ತರಣೆ ಮಾಡಿರುವುದು ಕಳೆದ ವರ್ಷದಲ್ಲಿ. ಡಿಸೆಂಬರ್ ೩೧ರವರೆಗೆ ವಿಸ್ತರಣೆ ಮಾಡಲಾಗಿತ್ತು. ಮತ್ತೆ ನಾವು ಹೇಳಿದಹಾಗೆ ಓಟರ್ಸ್ ಲಿಸ್ಟ್ ಬಗ್ಗೆ ಮುಂದೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಮುಂದೆ ನೋಡುತ್ತೇನೆಂದು ಹೇಳಿದರು. ಇದು ಈ ಸದನಕ್ಕೆ ಕೊಡತಕ್ಕಂಥ ಸಮರ್ಪಕವಾದ ಉತ್ತರವಲ್ಲವೆಂದು ನಾನು ಹೇಳುತ್ತೇನೆ. ಮಾನ್ಯ ಸಚಿವರು ಎಲ್ಲಿಯವರೆಗೆ ಆಗುವುದಿಲ್ಲ ಅನ್ನುತ್ತಾರೆ ಅದನ್ನಾದರೂ ಹೇಳಲಿ ?

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬರೀ ಚುನಾವಣೆಗಳನ್ನು ಮಾಡಲಿಕ್ಕೆ ಹೋಗಿದ್ದಾರೆ. ಕೆಲವು ಪುರಸಭೆಗಳಿಗೆ ಚುನಾವಣೆಗಳು ಈಗತ್ತಾನೇ ಮುಗಿದಿದೆ. ಇವೊತ್ತು ಮುಗಿದಂಥ ಪುರಸಭೆಗಳಿಗೂ ಕೂಡ ಡಿಸೆಂಬರ್ ೩೧ರ ವರೆಗೆ ಜೀವಂತವಿರಲು ತೀರ್ಮಾನ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಈಗ ನಾಲ್ಕು ತಿಂಗಳು ರದ್ದು ಮಾಡಿ ಆಡ್ಮಿನಿಸ್ಟ್ರೇಟರನ್ನು ಹಾಕಬೇಕು ಎನ್ನುವ ತೀರ್ಮಾನ ತೆಗೆದುಕೊಂಡು ಸದ್ಯಕ್ಕೆ ೩೧ ಡಿಸೆಂಬರ್‌ವರೆಗೆ ಮುಂದುವರಿಸಿದ್ದೇವೆ.

ಚೋಳನಾಯಕನ ಹಳ್ಳಿಗೆ ಕುಡಿಯುವ ನೀರಿನ ಸರಬರಾಜು

೪೪೪ (೮೧) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿ ನಗರ).—ಮಾನ್ಯ ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕಿನ ಚೋಳನಾಯ್ಕನ ಹಳ್ಳಿಗೆ ಹೊಸ ಕೊಳವಿಯ ನೀರು ಸರಬರಾಜು ಯೋಜನೆಯಡಿಯಲ್ಲಿ ಕುಡಿಯುವ ನೀರು ಪೂರೈಸಲು ಸರ್ಕಾರದಿಂದ ಮಂಜೂರಾತಿ ಆಗಿದೆಯೆ ?

(ಆ) ಹಾಗಿದ್ದಲ್ಲಿ ಮಂಜೂರು ಮಾಡಲಾಗಿರುವ ಅಂದಾಜು ವೆಚ್ಚವೆಷ್ಟು ?

(ಇ) ಈ ಅಂದಾಜನಲ್ಲಿ ಇದುವರೆಗೂ ವೆಚ್ಚ ಮಾಡಲಾಗಿರುವ ಒಟ್ಟು ಮೊತ್ತವೆಷ್ಟು (ವರ್ಷವಾರು ಖರ್ಚಿನ ವಿವರಗಳನ್ನು ಸಂಪೂರ್ಣ ನೀಡುವುದು)

(ಈ) ಈ ಯೋಜನೆಯನ್ನು ಇಲ್ಲಿಯತನಕ ಪೂರ್ಣಗೊಳಿಸದಿರಲು ಕಾರಣಗಳೇನು ? ಈ ವಿಳಂಬಕ್ಕೆ ಕಾರಣ ಕರ್ತರು ಯಾರು ?

(ಉ) ಎಷ್ಟು ದಿನಗಳೊಳಗೆ ಊರಿನಾದ್ಯಂತ ಕೊಳವಿಗಳ ಮೂಲಕ ನೀರನ್ನು ಒದಗಿಸಲಾಗುವುದು ?

ಶ್ರೀ ಶಬ್ಬುಲ್ ನಜೀರ್‌ಸಾಬ್ (ಗ್ರಾಮಾಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು).—

(ಅ) ಆಗಿದೆ.

(ಆ) ೨.೭೬ ಲಕ್ಷ ರೂ.

(ಇ)

ವರ್ಷ	ರೂ.
೧೯೮೬–೮೭	೫೪,೦೨೯–೨೩
೧೯೮೭–೮೮	— —
ಒಟ್ಟು	೫೪,೦೨೯–೨೩

(ಈ) ಟ್ಯಾಂಕ್ ಕೆಲಸಕ್ಕಾಗಿ ಪಾಯವನ್ನು ಆಗೆದಾಗ ಬಂಡೆ ಸಿಕ್ಕಿರುವುದರಿಂದ ಕೆಲಸ ವಿಳಂಬವಾಗಿದೆ.

(ಉ) ಮಾರ್ಚ್ ೧೯೮೮ರ ಒಳಗೆ ಪೂರ್ಣಗೊಳಿಸಲಾಗುವುದು.

ಮಾನ್ಯ ಅಧ್ಯಕ್ಷರೇ, ತಪ್ಪು ಮುಖಾಂತರ ಮಾನ್ಯ ಸದಸ್ಯರಲ್ಲಿ ಕ್ಷಮಾಪಣೆ ಕೇಳಿಕೊಳ್ಳುತ್ತೇನೆ. ಟ್ಯಾಂಕ್ ಪಾಯ ತೆಗೆಸುವಲ್ಲಿ ಬಂಡೆ ಸಿಕ್ಕಿದೆ ಎಂದು ಅಧಿಕಾರಿಗಳು ನಿರ್ದೇಶನ ತೋರಿಸಿದ್ದಾರೆ. ನಿರ್ದೇಶ ಅಧಿಕಾರಿಗೆ ಜವಾಬ್ದಾರಿಯನ್ನು ವಹಿಸಿ ೧೯೮೮ ಮಾರ್ಚ್‌ನೊಳಗೆ ಈ ಕೆಲಸವನ್ನು ಪೂರ್ತಿಗೊಳಿಸಿ ಕೊಡುತ್ತೇನೆ.